17,81,602 ಮೆಟ್ರಿಕ್ ಟನ್ ರಫ್ತು | ಅಮೆರಿಕ, ಚೀನಾದಲ್ಲಿ ಭಾರಿ ಬೇಡಿಕೆ

ದಾಖಲೆ ಸಾಗರ ಮತ್ಸ್ಯೋತ್ಪನ್ನ ರಫ್ತು

■ ಪ್ರಮೋದ ಹರಿಕಾಂತ ಕಾರವಾರ

pramod.harikant@timesgroup.com

ಬರ, ಮತ್ಸ್ಯ ಕ್ಷಾಮದ ಹೊರತಾಗಿಯೂ 2023-24ನೇ ಆರ್ಥಿಕ ವರ್ಷದಲ್ಲಿ 17,81,602 ಮೆಟ್ರಿಕ್ ಟನ್ ಸಾಗರ ಮತ್ಸ್ಯೋತ್ಪನ್ನವನ್ನು (ಸಂಸ್ಕರಿಸಿದ) ರಫ್ತು ಮಾಡುವ ಮೂಲಕ ಭಾರತವು ಸಾರ್ವತ್ರಿಕ ದಾಖಲೆ ಮಾಡಿದೆ. ಆಮದಿನಲ್ಲಿ ಅಮೆರಿಕ, ಚೀನಾ, ಜಪಾನ್ ದೇಶಗಳು ದೊಡ್ಡ ಪಾಲು ಹೊಂದಿವೆ. ಸೀಗಡಿ ಉತ್ಪನ್ನಗಳನ್ನು ಗರಿಷ್ಠ ಪ್ರಮಾಣದಲ್ಲಿ ರಫ್ತು ಮಾಡಲಾಗಿದೆ. ಹಸಿ ಮೀನು, ಒಣ ಮೀನು, ಮೀನೆಣ್ಣೆ ಸೇರಿ ಭಾರತದ ವಿವಿಧ ರೀತಿಯ ಮತ್ಸ್ಯ ಉತ್ಪನ್ನಗಳಿಗೆ ವಿದೇಶದಲ್ಲಿ ದೊಡ್ಡ ಮಾರುಕಟ್ಟೆ ದೊರೆತಿದೆ. ಇದರಿಂದ ದೇಶದಲ್ಲಿರುವ ಮೀನುಗಾರಿಕೆ ಕ್ಷೇತ್ರಕ್ಕೆ ಬೇಡಿಕೆ ಹೆಚ್ಚಿದೆ.

ವಿಶಾಲವಾದ ಕಡಲತೀರ ಹೊಂದಿರುವ ಭಾರತದಲ್ಲಿ ಸಾಗರ ಮತ್ಸ್ಯೋದ್ಯಮವು ದೊಡ್ಡ ಆದಾಯ ಕ್ಷೇತ್ರವಾಗಿದೆ. 2022-23ನೇ ಆರ್ಥಿಕ ವರ್ಷದಲ್ಲಿ ಭಾರತವು 17,35,286 ಮೆಟ್ರಿಕ್ ಟನ್ ಸಾಗರ ಮತ್ಸ್ಯೋತ್ಪನ್ನರಫ್ತು ಮಾಡಿತ್ತು. ಈ ವರ್ಷ ಸಾಗರ ಮತ್ಸ್ಯೋತ್ಪನ್ನ ರಫ್ತು ಶೇ. 2.67ರಷ್ಟು ಹೆಚ್ಚಾಗಿದೆ. ಅದರಲ್ಲಿ ಅಮೆರಿಕ, ಚೀನಾ ನಿರಂತರವಾಗಿ ದೊಡ್ಡ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳುತ್ತಿವೆ.

ಕಳೆದ ವರ್ಷ ಸಾಗರ ಮತ್ಸ್ಯೋತ್ಪನ್ನದ ಒಟ್ಟು ರಫ್ತು ಮೌಲ್ಯ 63,969.14 ಕೋಟಿ ರೂ. (8.09 ಶತಕೋಟಿ ಡಾಲರ್) ಆಗಿತ್ತು. ಈ ವರ್ಷ ರಫ್ತು ಮೌಲ್ಯ ಸ್ವಲ್ಪ ಕುಸಿದಿದೆ. ಅಂದರೆ, 60,523.89 ಕೋಟಿ ರೂ. (7.38 ಶತಕೋಟಿ ಡಾಲರ್) ಆಗಿದೆ. ಬೆಲೆ ಕಡಿಮೆಯಾದರೂ ಹೆಚ್ಚಿನ ಸರಕು ರಫ್ತು ಆಗಿರುವುದು ಮಹತ್ವದ ಬೆಳವಣಿಗೆಯಾಗಿದೆ ಎಂದು ಕೇಂದ್ರದ ಸಾಗರ ಉತ್ಪನ್ನ ರಫ್ತು ಅಭಿವೃದ್ಧಿ ಪ್ರಾಧಿಕಾರ ತಿಳಿಸಿದೆ.

ಟಾಪ್ 10 ರಾಷ್ಟ್ರಗಳು ಮತ್ತು ರಫ್ತು ಪ್ರಮಾಣ

ಅಮೆರಿಕ	34.53%
ಚೀನಾ	18.76%
ಜಪಾನ್	5.42
ವಿಯೆಟ್ನಾಂ	5.30%
ಥೈಲ್ಯಾಂಡ್	3.82%
ಕೆನಡಾ	2.70%
ಸ್ಪೇನ್	2.65%
ಬೆಲ್ಜಿಯಂ	2.42%
ಅರಬ್ ರಾಷ್ಟ್ರಗಳು	2.15%
ಇಟಲಿ	2.14%

ಎಐ ಚಿತ್ರ

ರಫ್ತು ಬೇಡಿಕೆಯ ಟಾಪ್ 5 ಮತ್ಸ್ಯೋತ್ಪನ್ನ

ಸೀಗಡಿ	40.19%
ಮೀನು	21.42%
ಆಹಾರಕ್ಕೆ ಬಳಸದ ಒಣಗಿದ ಮೀನು, ಸೀಗಡಿ	15.89%
ಸ್ಕ್ವಿಡ್	5.25%
ಸುರ್ಮಾಯ್ (ಕಿಂಗ್ ಫಿಶ್)	4.12%

ಸೀಗಡಿಗೆ ಬೇಡಿಕೆ

ರಫ್ತಾದ ಒಟ್ಟೂ ಮತ್ಸ್ಯೋತ್ಪನ್ನದ ಪೈಕಿ ಶೇ. 40.19ರಷ್ಟು ಸೀಗಡಿಯೇ ಇದೆ. ಅದರ ಮೌಲ್ಯವೇ 40,013.54 ಕೋಟಿ ರೂ. ಆಗಿದ್ದು, ರಫ್ತಿನ ಒಟ್ಟೂ ಆದಾಯದ ಪಾಲಿನಲ್ಲಿ ಸೀಗಡಿ ಮೌಲ್ಯ ಶೇ.66.12 ಇದೆ. ಕಳೆದ ವರ್ಷಕ್ಕಿಂತ ಶೇ. 0.69 ರಷ್ಟು ಹೆಚ್ಚು ಸೀಗಡಿ ರಫ್ತಾಗಿದೆ. ಇತ್ತೀಚಿನ ವರ್ಷಗಳಲ್ಲಿ ಕರ್ನಾಟಕ ಸೇರಿ ಕರಾವಳಿ ರಾಜ್ಯಗಳಲ್ಲಿ ಸೀಗಡಿ ಕೃಷಿ ದೊಡ್ಡ ಉದ್ಯಮವಾಗಿ ಬೆಳೆಯುತ್ತಿದೆ.

2023-24ರಲ್ಲಿ ಭಾರತದಿಂದ 7,16,004 ಟನ್ ಸೀಗಡಿ ರಫ್ತಾಗಿದೆ. ಅಮೆರಿಕ 2,97,571 ಟನ್ ಮತ್ತು ಚೀನಾ 1,48,483 ಟನ್ ಸೀಗಡಿ ಆಮದು ಮಾಡಿಕೊಂಡಿವೆ. ಬ್ಲಾಕ್ ಟೈಗರ್ ಸೀಗಡಿಗೆ ಹೆಚ್ಚು ಡಿಮ್ಯಾಂಡ್ ಇದೆ. ಸ್ಕ್ವಿಡ್, ಸುರ್ಮಾಯಿ (ಕಿಂಗ್ ಫಿಶ್), ಸೆಫಿಯಾ ಸೇರಿ ವಿವಿಧ ಜಾತಿಯ ಮೀನುಗಳು, ಒಣ ಮೀನುಗಳು, ಆಕ್ಟೋಪಸ್‌ಗಳಿಗೂ ಹೆಚ್ಚಿನ ಬೇಡಿಕೆ ಇದೆ.

VijayaKarnataka Pg.14

ಸಕ್ಕರೆ ಉದ್ಯಮದಲ್ಲಿ ಸುಧಾರಿತ ತಂತ್ರಜ್ಞಾನಗಳ ಬಳಕೆ ಅಗತ್ಯ

ಜೈವಿಕ ಇಂಧನ ವಲಯದಲ್ಲಿ ಜಾಗತಿಕ ಸಹಭಾಗಿತ್ವ: ಜೋಶಿ

ಹೊಸದಿಲ್ಲಿ: ಸಕ್ಕರೆ ಉದ್ಯಮದ ಮತ್ತಷ್ಟು ಅಭಿವೃದ್ಧಿಗೆ ಅಂತಾರಾಷ್ಟ್ರೀಯ ಸಹಯೋಗ ಮತ್ತು ಸುಧಾರಿತ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವ ಅಗತ್ಯವಿದೆ ಎಂದು ಕೇಂದ್ರ ಗ್ರಾಹಕ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ವಿತರಣೆ ಮತ್ತು ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವ ಪ್ರಹ್ಲಾದ್ ಜೋಶಿ ಅಭಿಪ್ರಾಯಪಟ್ಟಿದ್ದಾರೆ.

ಜೂನ್ 25 ರಿಂದ 27 ರವರೆಗೆ ಹೊಸದಿಲ್ಲಿಯಲ್ಲಿ ನಡೆಯುತ್ತಿರುವ 'ಐಎಸ್‌ಒ ಕೌನ್ಸಿಲ್ ಮೀಟಿಂಗ್' ಎಂಬ ಜಾಗತಿಕ ಕಾರ್ಯಕ್ರಮದ ಭಾಗವಾಗಿ ನಡೆದ ಕಾರ್ಯಾಗಾರವೊಂದರಲ್ಲಿ ಮಾತನಾಡಿದ ಜೋಶಿ, ಜೈವಿಕ ಇಂಧನ ಉದ್ಯಮಕ್ಕೆ ಕಬ್ಬಿನ ಮಹತ್ವವನ್ನು ಎತ್ತಿ ತೋರಿಸಿದರು. ಭಾರತವು ಸುಮಾರು 10 ಪ್ರತಿಶತದಷ್ಟು ಎಥೆನಾಲ್ ಮಿಶ್ರಣವನ್ನು ಸಾಧಿಸಿದೆ. ಇದು ದೇಶದಲ್ಲಿ ನವೀಕರಿಸಬಹುದಾದ ಶಕ್ತಿಯನ್ನು ಹೆಚ್ಚಿಸುತ್ತಿದೆ ಎಂದರು.

ಜೈವಿಕ ಇಂಧನ ಉದ್ಯಮದಲ್ಲಿ ಭಾರತದ ಪ್ರಗತಿ, ಆರ್ಥಿಕ ಬೆಳವಣಿಗೆ ಮತ್ತು ಕೃಷಿ ಸಮೃದ್ಧಿ ಎರಡರ ಮೇಲೂ

ಸಕಾರಾತ್ಮಕ ಪರಿಣಾಮ ಬೀರುತ್ತಿದೆ. ಜೈವಿಕ ಇಂಧನಗಳನ್ನು ಬಳಸುವ ಮೂಲಕ, ನಾವು ನವೀಕರಿಸಬಹುದಾದ ಶಕ್ತಿಯನ್ನು ಹೆಚ್ಚಿಸುವುದರ ಜೊತೆಗೆ ರೈತರಿಗೆ ಹೊಸ ಅವಕಾಶಗಳನ್ನು ಸೃಷ್ಟಿಸುತ್ತಿದ್ದೇವೆ. ಜೈವಿಕ ಇಂಧನಗಳು ಭಾರತವನ್ನು ಸ್ವಾವಲಂಬನೆ ಮತ್ತು ಸುಸ್ಥಿರ ಭವಿಷ್ಯದ ಕಡೆಗೆ ಮುನ್ನಡೆಸುತ್ತಿವೆ ಎಂದು ಜೋಶಿ ಹೇಳಿದರು.

Hosadigantha
Pg.05

ಉತ್ಪಾದನೆ ಇಳಿಮುಖ ಜೀರಾ ಧಾರಣೆ ತೇಜಿ

ಉತ್ತಮ ಬೇಡಿಕೆ ಹಾಗೂ ಜಾಗತಿಕ ಪೂರೈಕೆ ಕುಸಿತದ ಹಿನ್ನೆಲೆಯಲ್ಲಿ ದೇಶೀಯ ಮಾರುಕಟ್ಟೆಯಲ್ಲಿ ಜೀರಿಗೆ(ಜೀರಾ) ಬೆಲೆ ಹೆಚ್ಚಳವಾಗಿದೆ. ವಾಯದಾ ಪೇಟೆಯಲ್ಲಿ ಜೀರಾ ದರ ಶೇ.9ರಷ್ಟು ಏರಿಕೆಯಾಗಿದೆ. ಉತ್ತಮ ದರ ನಿರೀಕ್ಷೆಯಲ್ಲಿರುವ ರೈತರು ಜೀರಾವನ್ನು ಹೆಚ್ಚಿನ ಪ್ರಮಾಣದಲ್ಲಿ ಮಾರುಕಟ್ಟೆಗೆ ತರದೇ ದಾಸ್ತಾನು ಮಾಡಿಟ್ಟುಕೊಂಡಿರುವುದು ಕೂಡ ಬೆಲೆ ಏರಿಕೆಗೆ ಕಾರಣವಾಗಿದೆ.

ಮಾರುಕಟ್ಟೆಯಲ್ಲಿನ ಸಟ್ಟಾ ವ್ಯವಹಾರ, ಬೆಳೆ ಉತ್ಪಾದನೆ ಅಂದಾಜಿನ ತಪ್ಪು ಲೆಕ್ಕಾಚಾರ, ವಿದೇಶಗಳಲ್ಲಿ ಉತ್ಪಾದನೆ ಇಳಿಮುಖವಾಗಿರುವುದು ಜೀರಾ ಬೆಲೆ ಮೇಲೆ ಪರಿಣಾಮ ಬೀರಿದೆ. ಇತ್ತೀಚೆಗೆ ಜೀರಾ ಬೆಲೆ ಬಹಳಷ್ಟು ಕುಸಿದಿತ್ತು. ನಂತರ ಈಗ ನಿಧಾನವಾಗಿ ಏರುಗತಿಯಲ್ಲಿ ಸಾಗಿದೆ ಎಂದು ಮಾರುಕಟ್ಟೆ ವಿಶ್ಲೇಷಕರು ಹೇಳುತ್ತಾರೆ. ಗುಜರಾತ್‌ನ ಎಪಿಎಂಸಿಯೊಂದರಲ್ಲಿ ಜೀರಾ ಮಾದರಿ ದರ ಮೇ.1ರಲ್ಲಿ ಕ್ವಿಂಟಲ್‌ಗೆ 22,850 ರೂ ಇದ್ದುದು ಜೂನ್ ಮೊದಲ ವಾರದ ಹೊತ್ತಿಗೆ 30,750ರೂಗೆ ಏರಿಕೆಯಾಗಿದೆ. ವಾಯದಾ ಪೇಟೆಯಲ್ಲಿ ಜೂನ್ ಗುತ್ತಿಗೆ ದರ 30,000 ರೂಗೆ ತಲುಪಿದ ನಂತರ 27,090ರೂದಲ್ಲಿ ಮುಕ್ತಾಯಗೊಂಡಿದೆ.

ಕಳೆದ ವರ್ಷ ಜೂನ್‌ದಲ್ಲಿ ಗುಜರಾತ್‌ನ ಉಂಜಾ ಎಪಿಎಂಸಿಯಲ್ಲಿ ಬೆಲೆ ಕ್ವಿಂಟಲ್‌ಗೆ 40,000 ರೂ ಇತ್ತು. ವಾಯದಾ ಪೇಟೆಯಲ್ಲಿ 40000 ರೂಗಿಂತ ಅಧಿಕವಾಗಿತ್ತು. 2023ನೇ ಸಾಲಿನ ಆಗಸ್ಟ್–ಸೆಪ್ಟೆಂಬರ್‌ನಲ್ಲಿ ದರ ಉತ್ತುಂಗಕ್ಕೇರಿದ ನಂತರ ಶೇ.70ಕ್ಕಿಂತಲೂ ಕಡಿಮೆಯಾಗಿತ್ತು. ಆದರೆ ಪ್ರಸಕ್ತ ಸಾಲಿನ ಎಪ್ರಿಲ್ ಮಧ್ಯದಿಂದ ಇದುವರೆಗೆ ಬೆಲೆ ಶೇ.35ರಷ್ಟು ಹೆಚ್ಚಳವಾಗಿದೆ. ಅಕಾಲಿಕ ಮಳೆ ಹಾಗೂ ಬಿಸಿ ಗಾಳಿಯ ಪರಿಣಾಮವಾಗಿ 2021–22 ಹಾಗೂ 2022–23ನೇ ಸಾಲಿನಲ್ಲಿ ಜೀರಾ ಬೆಳೆ ಹಾನಿಯಾಗಿದೆ. ಉತ್ಪಾದನೆ ಅನುಕ್ರಮವಾಗಿ 5.56 ಲಕ್ಷ ಟನ್ ಹಾಗೂ 6.27 ಲಕ್ಷ ಟನ್‌ದಷ್ಟಾಗಿದೆ.

ಜೀರಾ ಬೆಳೆ ಹೆಕ್ಟೇರುವಾರು ಕ್ಷೇತ್ರದಲ್ಲಿ ಹೆಚ್ಚಳವಾದ ಕಾರಣ ಪ್ರಸಕ್ತ ಹಂಗಾಮಿನಲ್ಲಿ ಜೀರಾ ಉತ್ಪಾದನೆ 8.5–9 ಲಕ್ಷ ಟನ್‌ದಷ್ಟಾಗಿ ಶೇ.30ರಷ್ಟು ಹೆಚ್ಚಳವಾಗುವ ಸಾಧ್ಯತೆ ಇದೆ ಎಂದು ಅಂದಾಜಿಸಲಾಗಿದೆ. ಗುಜರಾತ್‌ನಲ್ಲಿ ಬಿತ್ತನೆ ಕ್ಷೇತ್ರ ಶೇ.104ರಷ್ಟು ಹೆಚ್ಚಳವಾದರೆ, ರಾಜಸ್ಥಾನದಲ್ಲಿ ಶೇ.16ರಷ್ಟು ಜಾಸ್ತಿಯಾಗಿದೆ. ಕಳೆದ ವರ್ಷ ಬೆಲೆ ಹೆಚ್ಚಾದ ಕಾರಣ 2023–24ನೇ ಸಾಲಿನ ಎಪ್ರಿಲ್–ಫೆಬ್ರುವರಿ ಅವಧಿಯಲ್ಲಿ ಜೀರಾ ರಫ್ತು 1.32 ಲಕ್ಷ ಟನ್ ದಷ್ಟಾಗಿ ಶೇ.21ರಷ್ಟು ಇಳಿಕೆಯಾಗಿದೆ.

SamyukthaKarnataka Pg.07

ಹೀರೇಕಾಯಿಯ ಹಿರಿಯ ಗುಣ

ಆರೋಗ್ಯವೇ ಭಾಗ್ಯ

ಪುರುಷೋತ್ತಮ್

ಹೀರೇಕಾಯಿ ಯಾರಿಗೆ ತಾನೆ ಗೊತ್ತಿಲ್ಲ ಹೇಳಿ. ಹರಿತವಾದ ಸಿಪ್ಪೆಯಿಂದ ತನ್ನ ಬೀಜದವರೆಗೂ ಪ್ರಯೋಜನಕಾಯಿಯಾದ ತರಕಾರಿ ಇದು. ರೊಟ್ಟಿ, ಚಪಾತಿ, ಪಾರಾಟ, ಪೂರಿ, ಅನ್ನದೊಂದಿಗೆ ಸೇವಿಸಲು ತಯಾರಿಸಲಾಗುವ ಈ ಹೀರೆಕಾಯಿಯನ್ನು ಇಷ್ಟಪಡದೇ ಇರುವವರು ತುಂಬಾ ವಿರಳ ತಿನ್ನಲು ರುಚಿ ಮಾತ್ರವಲ್ಲದೆ ಪೋಷಕಾಂಶಗಳಿಂದ ಸಮೃದ್ಧವಾಗಿದ್ದು ದೇಹಕ್ಕೆ ಹಲವಾರು ರೀತಿಯಲ್ಲಿ ಪ್ರ ಯೋಜನವನ್ನು ನೀಡುತ್ತದೆ. ಇದರ ಎಲೆಗಳು, ಬೇರು ಗಳು ಮತ್ತು ಬೀಜಗಳು ಎಲ್ಲವೂ ಒಂದಾಲ್ಲಾ ಒಂದು ರೀತಿ ದೇಹಕ್ಕೆ ಬೇಕಾದ ಪೋಷಕಾಂಶಗಳನ್ನು ನೀಡುತ್ತವೆ.

ಹೀರೆಕಾಯಿಯ ಆರೋಗ್ಯಕರ ಪ್ರಯೋಜನಗಳು:- ತೂಕ ಇಳಿಕೆಗೆ ಪ್ರಯೋಜನಕಾರಿ; ಹೀರೆಕಾಯಿಯಲ್ಲಿ ಕಡಿಮೆ ಪ್ರಮಾಣದ ಕ್ಯಾಲೋರಿಗಳು ಲಭ್ಯವಿದ್ದು, ಕೊಬ್ಬಿನ ಅಂಶ ಮತ್ತು ಕೊಲೆಸ್ಟ್ರಾಲ್ ಅಂಶ ಕೂಡ ಸಾಕಷ್ಟು ಕಡಿಮೆ ಇದೆ. ಹಾಗಾಗಿ ಪ್ರತಿ ದಿನ ನೀವು ಆಹಾರ ಸೇವನೆ ಮಾಡುವಾಗ ಹೀರೆಕಾಯಿಯ ಖಾದ್ಯಗಳನ್ನು ಸೇವನೆ ಮಾಡುವುದರಿಂದ ನಿಮ್ಮ ಹೇಹದಲ್ಲಿ ಆಹಾರದ ಮೂಲಕ ಸೇರುವ ಪ್ರೊಟೀನ್, ಕಾರ್ಬೋಹೈಡ್ರೇಟ್ ಮತ್ತು ಕೊಬ್ಬಿನ ಅಂಶಗಳನ್ನು ಸರಿಯಾಗಿ ಜೀರ್ಣ ಮಾಡಿ ವಿಪರೀತ ಕೊಬ್ಬಿನ ಅಂಶಗಳು ನಿಮ್ಮ ದೇಹದಲ್ಲಿ ಸೇರ್ಪಡೆ ಆಗುವುದನ್ನು ತಪ್ಪಿಸಿ ನಿಮ್ಮ ಸೊಂಟದ ಸುತ್ತ ಮುತ್ತ ಅಡಗಿರುವ ಬೊಜ್ಜಿನ ಪ್ರಮಾಣವನ್ನು ಕಡಿಮೆ ಮಾಡುತ್ತದೆ.

ಮಲಬದ್ಧತೆ ಸಮಸ್ಯೆಗೆ ಪರಿಹಾರ; ಹೀರೆಕಾಯಿಯಲ್ಲಿ ನೀರಿನ ಅಂಶ ಅಧಿಕವಾಗಿದೆ. ಇದರಿಂದ ತಯಾರಾದ ಯಾವುದೇ ಆಹಾರವನ್ನು ಸೇವಿಸುವುದರಿಂದ ಸರಿಯಾಗಿ ಜೀರ್ಣ ಮಾಡುವಷ್ಟು ನೀರಿನ ಪ್ರಮಾಣ ದೇಹದಲ್ಲಿ ಲಭ್ಯ ಆಗುತ್ತದೆ. ಇದರ ಜೊತೆಗೆ ಹೀರೇಕಾಯಿಯಲ್ಲಿ 'ಸೆಲ್ಯುಲಲೋಸ್ ಎಂಬ ನೈಸರ್ಗಿಕ ನಾರಿನ ಅಂಶ ಇರುವುದರಿಂದ ಆಹಾರವನ್ನು ಸರಿಯಾಗಿ ಜೀರ್ಣ ಮಾಡುವಂತಹ ಪ್ರಕ್ರಿಯೆ ನಡೆಯುತ್ತದೆ. ಆಹಾರ ತಜ್ಞರ ಪ್ರಕಾರ ಒಂದು ಗ್ಲಾಸ್ ಹೀರೆಕಾಯಿ ಜ್ಯೂಸ್ ಗೆ ಸ್ವಲ್ಪ ಜೇನು ತುಪ್ಪ ಮುಶ್ರಣ ಮಾಡಿ ಸೇವಿಸುವುದರಿಂದ ಮಲಬದ್ಧತೆ ಸಮಸ್ಯೆ ದೂರವಾಗುತ್ತದೆ.

ಲಿವರ್‌ನ ಆರೋಗ್ಯವರ್ಧಕ; ನಮ್ಮ ದೇಹದಲ್ಲಿ ವಿಷಕಾರಿ ಅಂಶಗಳು ಹೆಚ್ಚಾಗಿ ಶೇಖರಣೆ ಆಗಬಾರದು ಅಂದರೆ ನಮ್ಮ ಲಿವರ್ ಯಕೃತ್ ಭಾಗ ಚೆನ್ನಾಗಿ ಕೆಲಸ ಮಾಡಬೇಕು. ನಮ್ಮ ದೇಹದ ರಕ್ತದಲ್ಲಿ ಕಂಡು ಬರುವ ವಿಷಕಾರಿ ಅಂಶಗಳನ್ನು ದೂರ ಮಾಡಿ ಅಳಿದುಳಿದ ಜೀರ್ಣವಾಗದ ಆಹಾರದಲ್ಲಿ ನಮ್ಮ ದೇಹಕ್ಕೆ ಬೇಕಾದ ಪೌಷ್ಟಿಕ ಸತ್ವಗಳನ್ನು ಹೀರಿಕೊಂಡು ನಮ್ಮ ದೇಹಕ್ಕೆ ಶಕ್ತಿ ಮತ್ತು ಸದೃಢತೆಯನ್ನು ಒದಗಿಸಬೇಕು.

ಕಣ್ಣಿನ ದೃಷ್ಟಿ ರಕ್ಷಕ; ಹೀರೆಕಾಯಿಯಲ್ಲಿ ವಿಟಮಿನ್ 'ಎ' ಅಂಶ ಗಣನೀಯ ಪ್ರಮಾಣದಲ್ಲಿ ಹೇರಳವಾಗಿದ್ದು ಜಣ್ಣಿನ ದೃಷ್ಟಿಗೆ ತುಂಬಾ ಸಹಕಾರಿಯಾಗಿ ಇದೆಯೆಂದು ಸ್ವತ: ತಜ್ಞರೇ ಹೇಳುತ್ತಾರೆ. ಕಣ್ಣಿನ ಪರೆ ಸಮಸ್ಯೆಯನ್ನು ಹೀರೆಕಾಯಿಯಲ್ಲಿರುವ ಬೀಟಾ-ಕ್ಯಾರೋಟಿನ್ ಎಂಬ ವಿಟಮಿನ್ 'ಎ' ಅಂಶದ ರೂಪ ಸರಿ ಪಡಿಸುತ್ತದೆ.

ತಲೆನೋವಿಗೆ ರಾಮಬಾಣ; ಹೀರೆಕಾಯಿ ತಲೆನೋವನ್ನು ಗುಣಪಡಿಸಲು ಸಹ ಸಹಾಯ ಮಾಡುತ್ತದೆ. ಸಂಶೋಧನೆಯ ಪ್ರಕಾರ, ಹೀರೆಕಾಯಿ ಎಲೆಗಳು ಮತ್ತು ಅದರ ಬೀಜಗಳ ಎಥೋಲಿಕ್ ಸಾರಗಳು ನೋವನ್ನು ಕಡಿಮೆ ಮಾಡಲು ಸಹಾಯಕವಾಗಿದೆ.

ಮಧುಮೇಹ ನಿಯಂತ್ರಕ; ಹೀರೆಕಾಯಿಯನ್ನು ಪ್ರಾಚೀನ ಕಾಲದಿಂದಲೂ ಮಧುಮೇಹವನ್ನು ನಿಯಂತ್ರಿಸುವ ತರಕಾರಿ ಎಂದು ಕರೆಯಲಾಗುತ್ತದೆ. ಹೀರೆಕಾಯಿಯ ಎಥೋಲಿಕ್ ಸಾರವು ಗ್ಲೂಕೋಸ್ ಮಟ್ಟವನ್ನು ಕಡಿಮೆ ಮಾಡುವಲ್ಲಿ ಕೆಲಸ ಮಾಡುತ್ತದೆ ಎಂದು ಸಂಶೋಧನೆ ಹೇಳುತ್ತದೆ.

ಅಸ್ತಮಾ ನಿವಾರಕ; ಅಸ್ತಮಾ ಅಥವಾ ಉಸಿರಾಟದ ತೊಂದರೆ ಉಳ್ಳವರಿಗೆ, ಹೀರೆಕಾಯಿ ತುಂಬಾನೇ ಪ್ರಯೋಜನಕಾರಿ. ಅಸ್ತಮಾದಿಂದ ಬಳಲುತ್ತಿರುವವರು ಅರ್ಧ ಬಟ್ಟಲು ಸೊಪ್ಪನ್ನು ರಸದ ರೂಪದಲ್ಲಿ ಸೇವಿಸಬಹುದು.

Vishwavani Pg.11

Cotton consumption second highest in 10 years, says Ministry

The Hindu Bureau
COIMBATORE

Cotton consumption by the textile industry in the current marketing season (October 2023 to September 2024) is one of the highest this decade, said a press release from the Ministry of Textiles.

The third meeting of the Committee on Cotton Production and Consumption for this season was held on Monday. Roop Rashi, Textile Commissioner, said this year will be the second-highest consumption in 10 years with demand of about 307 lakh bales, including 103 lakh bales from the MSME textile units.

Cotton production this season is expected to be 325.22 lakh bales, imports 12 lakh bales, and exports 28 lakh bales. The season is likely to end with 47.38 lakh bales as closing stock.

Industry stakeholders said current Indian cotton prices are higher than those internationally and are unlikely to rise further, and textile mills are operating at 75-80% capacity.

The Hindu Pg.17

SamyukthaKarnataka Pg.4b

ಸಂಕಷ್ಟದಲ್ಲಿ ಬಿದಿರು ವ್ಯಾಪಾರಿಗಳು

ಬಿದಿರಿನ ಬೆಲೆ ಹೆಚ್ಚಾಗಿದ್ದು, ಕೆಲಸಗಾರರ ಕೂಲಿಯೂ ದುಪ್ಪಟ್ಟು
।ಬಿಸಿಲು, ಮಳೆ ಎನ್ನದೆ ವ್ಯಾಪಾರ ಮಾಡುವ ಪರಿಸ್ಥಿತಿ

ವಿಜಯಪುರ ಪಟ್ಟಣದಲ್ಲಿ ಬಿದಿರು ವ್ಯಾಪಾರಿಗಳು ಬೇರೆ ಕಡೆಯಿಂದ ತಂದ ಬಿದಿರನ್ನು ದಾಸ್ತಾನು ಮಾಡಿರುವ ದೃಶ್ಯ

■ **ವಿಜಯಪುರ ಸತೀಶಕುಮಾರ್ ಜಿ.**

ಸಂ.ಕ. ಸಮಾಚಾರ, ವಿಜಯಪುರ
'ಬಿದಿರು' ಹುಟ್ಟಿದಾಗ ತೊಟ್ಟಿಲಾಗುವ ಅಂತೆಯೇ ಜೀವನದ ಕಡೆಯ ಪಯಣಕ್ಕೂ ಹಾಸಿಗೆ ಆಗಲಿದೆ.

ಈ ಹಿಂದೆ ಬಡವರು ಮಾತ್ರ ಬಳಸುತ್ತಿದ್ದ ಬಿದಿರು ಇದೀಗ ಶ್ರೀಮಂತರ ಮನೆಯ ಕರಕುಶಲ ಸಾಮಗ್ರಿಯಾಗಿ ಬಳಸಲಾಗುತ್ತಿದೆ. ಆದರೆ ಗ್ರಾಮೀಣ ಭಾಗದಲ್ಲಿ ಬಿದಿರಿನ ಕರಕುಶಲ ಸಾಮಗ್ರಿಗಳನ್ನು ತಯಾರಿಸುವವರ ಸಂಕಷ್ಟ ಮಾತ್ರ ತಪ್ಪಿಲ್ಲ. ಕಾರಣ ಬಿದಿರಿನ ಬೆಲೆ ಹೆಚ್ಚಾಗಿದ್ದು ಜೊತೆಗೆ ಕೆಲಸಗಾರರ ಕೂಲಿಯೂ ದುಪ್ಪಟ್ಟಾಗಿದೆ. ತಯಾರಿಸಿದ ವಸ್ತುಗಳ ಮಾರಟಕ್ಕಾಗಿ ಸಂತೆ, ರಸ್ತೆ ಬದಿ ಇಟ್ಟು ಬಿಸಿಲು, ಮಳೆ ಎನ್ನದೆ ವ್ಯಾಪಾರ ಮಾಡುವ ಪರಿಸ್ಥಿತಿ ಇದೆ.

ಗ್ರಾಮೀಣ ಆರ್ಥಿಕ ವ್ಯವಸ್ಥೆಯಲ್ಲಿ ಬಿದಿರು ಬಹಳ ಮಹತ್ವದ ಪಾತ್ರ ನಿರ್ವಹಿಸುತ್ತಿದೆ. ಇದನ್ನು ಮನಗಂಡ ಭಾರತ ಸರ್ಕಾರವು ಕೃಷಿ ಮತ್ತು ಸಹಕಾರಿ ಮಂತ್ರಾಲಯದ ಅಡಿಯಲ್ಲಿ 'ರಾಷ್ಟ್ರೀಯ ಬಿದಿರು ಯೋಜನೆ' ಕಾರ್ಯಕ್ರಮ ರೂಪಿಸಿದೆ. ಇದರ ಅಂಗವಾಗಿ ರಾಜ್ಯ ಮಟ್ಟದಲ್ಲಿ ಬಿದಿರು ಅಭಿವೃದ್ಧಿ ಯೋಜನೆ ಸಂಸ್ಥೆಗಳು ಸ್ಥಾಪನೆಗೊಂಡಿವೆ. ಅರಣ್ಯ ಪ್ರದೇಶದಲ್ಲಿ ಬಿದಿರು ಬೆಳೆಯನ್ನು ಅಭಿವೃದ್ಧಿಪಡಿಸಲು ಅರಣ್ಯ ಅಭಿವೃದ್ಧಿ ಸಂಸ್ಥೆ ಮತ್ತು ರೈತರ ಹೊಲ ಗದ್ದೆಗಳಲ್ಲಿ ಬಿದಿರು ಬೆಳೆಸಲು ಬಿದಿರು ಅಭಿವೃದ್ಧಿ ಸಂಸ್ಥೆಗಳನ್ನು ಜಿಲ್ಲಾಮಟ್ಟದಲ್ಲಿ ರಚಿಸಿದ್ದು, ಇದು ಜಿಲ್ಲಾಮಟ್ಟದಲ್ಲಿ ಮಾತ್ರ ಇದೆ, ಗ್ರಾಮೀಣ ಪ್ರದೇಶಕ್ಕೆ ಬರುವುದಿಲ್ಲ ಎನ್ನುತ್ತಾರೆ ರೈತರು.

ಗ್ರಾಮೀಣ ಪ್ರದೇಶ ಹಾಗೂ ನಗರ ಪ್ರದೇಶಗಳಲ್ಲಿ ಬಿದಿರಿನ ಮೇಳಗಳನ್ನು ಆಯೋಜಿಸಿ ಬಿದಿರಿನ ಮಹತ್ವದ ಬಗ್ಗೆ ಜನರಿಗೆ ಅರಿವು ಮೂಡಿಸುವ ಕಾರ್ಯವನ್ನು ಸರ್ಕಾರ ಮಾಡಬೇಕು. ಬಿದಿರಿನ ಕರಕುಶಲ ವಸ್ತು ಪ್ರದರ್ಶನಗಳನ್ನು ಆಯೋಜಿಸಬೇಕು, ಜನರಿಗೆ ಬಿದಿರಿನ ವಸ್ತುಗಳ ಬಳಕೆ ಬಗ್ಗೆ ತಿಳಿಸುವ ಕಾರ್ಯಕ್ರಮ ಹಮ್ಮಿಕೊಂಡು ಬಿದಿರಿನ ಗುಡಿ ಕೈಗಾರಿಕೆಗಳಿಗೆ ಪ್ರೋತ್ಸಾಹಧನ ನೀಡಬೇಕು ಎನ್ನುವುದು ಜನರ ಆಶಯವಾಗಿದೆ.

ಪರಿಸರಕ್ಕೆ ಮಾರಕವಾಗಿರುವ ಪ್ಲಾಸ್ಟಿಕ್ ತ್ಯಜಿಸಿ ನಿತ್ಯ ಜೀವನದಲ್ಲಿ ಬಿದಿರಿನ ಬಳಕೆ ರೂಢಿಸಿಕೊಳ್ಳಬೇಕಿದೆ. ತಾಲೂಕು ಕೇಂದ್ರಗಳಲ್ಲಿ ಗ್ರಾಮೀಣ ಪ್ರದೇಶದ ಜನರಿಗೆ ಅನುಕೂಲವಾಗುವಂತೆ ಬಿದಿರು ಕರಕುಶಲ ಕೇಂದ್ರ ಮಾರಾಟ ಮಳಿಗೆ ಸ್ಥಾಪಿಸಬೇಕು ಎಂದು ಒತ್ತಾಯಿಸಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಅರಣ್ಯ ಇಲಾಖೆಯಿಂದ ಬಿದಿರು ಸಸಿ ಕೊಡುವ ವ್ಯವಸ್ಥೆ ಆಗಬೇಕು, ಬಿದಿರು ಗೃಹ ಕೈಗಾರಿಕೆ ಮಾಡುವ ಜನರಿಗೆ ರಿಯಾಯ್ತಿ ದರದಲ್ಲಿ ಬಿದಿರು ಪೂರೈಸಿ ಅವರ ಆರ್ಥಿಕ ವೃದ್ಧಿಗೆ ಸರ್ಕಾರ ಗಮನಹರಿಸಬೇಕು. ಗ್ರಾಮೀಣ ಭಾಗದಲ್ಲಿ ಬಿದಿರು ನರ್ಸರಿ ಅಭಿವೃದ್ಧಿ ಕೇಂದ್ರ ಸ್ಥಾಪಿಸಬೇಕು.

ರಾಜ್ಯದಲ್ಲಿ ಪ್ರತಿ ಪ್ರದೇಶಕ್ಕೆ ಸೂಕ್ತವಾದ ಬಿದಿರು ತಳಿ ಸಂಶೋಧನೆ ಹಾಗೂ ಅಭಿವೃದ್ಧಿ ಆಗಬೇಕು, ಬಿದಿರು ಕುಶಲಕರ್ಮಿಗಳಿಗೆ ವೃತ್ತಿ ತರಬೇತಿ ಯೋಜನೆ ರೂಪಿಸಬೇಕು, ಸ್ವಂತ ಉದ್ದಿಮೆ ಕೈಗೊಳ್ಳಲು ಸೂಕ್ತ ಸಾಲ ಸೌಲಭ್ಯ ಮತ್ತು ಸಹಾಯಧನ ನೀಡಬೇಕು. 'ಹಸಿರು ಬಂಗಾರ' ಎಂದು ಕರೆಯುವ ಬಿದಿರನ್ನು ಒಂದು ಲಾಭದಾಯಕ ಬೆಳೆಯಾಗಿ ಭೆಳೆಯಲು ಸರ್ಕಾರವೂ ಬೆಳೆಗಾರರಿಗೆ ಪ್ರೋತ್ಸಾಹ ನೀಡಬೇಕು. ಯಂತ್ರಗಳನ್ನು ಬಳಸಿಕೊಂಡು ಬಿದಿರಿನಿಂದ ಗುಣಾತ್ಮಕ ಉತ್ಪನ್ನಗಳನ್ನು ತಯಾರಿಸಿದ ಯೋಜನೆಗಳನ್ನು ಹಮ್ಮಿಕೊಳ್ಳಬೇಕು ಎನ್ನುವುದು ವ್ಯಾಪಾರಸ್ಥರ ಒತ್ತಾಯವಾಗಿದೆ.

As FCI Buffer Swells, Exporters Demand Lifting of Curbs on Rice

Want fixed levy on quantity of rice exported as opposed to flat 20% duty on value of exports

Jayashree.Bhosale
@timesofindia.com

Pune: The Indian rice industry has demanded opening up of the export of white rice and broken rice and asked for changes in the duty structure of parboiled rice as the stocks with the Food Corporation of India (FCI) have swelled to 3.5 times the buffer norms as a delegation of the rice exporters met the central government officials on Tuesday.

"We have requested the central government to lift the ban on export of white rice and non-basmati aromatic rice. We have also requested to levy a fixed amount of duty on the quantity of parboiled rice exported instead of the existing flat 20% duty on the value of exports to avoid undervaluing," said Rajiv Kumar, president, The Rice Exporters Association (TREA).

The retail and wholesale inflation in rice has been in double digits since last year. India, the largest exporter of rice in the world, has banned export of broken rice export in August 2022. This was followed by a ban on export of non basmati white rice in July 2023, imposition of 20% export duty on parboiled rice in August 2023 and restrictions on export of basmati rice by imposing a minimum export price.

The Food Corporation of India is sitting on a mountain of rice with a stock of 50.5 million tonnes against the buffer norm of 13.5 million tonnes.

"With the output of the kharif crop of this year expected to be good due to the forecast of a good monsoon, it would be a challenge to find space for the kharif paddy procurement," said Kumar. Rice exporters have appraised the government that competing countries like Myanmar, Thailand and Vietnam are making inroads into the overseas markets developed by Indian exporters over many decades.

"The export duty on parboiled rice should be a fixed amount to rule out any variation in the duties paid at different ports by different entities," said Vijay Setia, a veteran of the rice industry. The rice industry is also concerned about the unemployment caused by the export ban.

Economics Times Pg.09

ದೇಶೀಯ ಮಾರುಕಟ್ಟೆಯಲ್ಲಿ ಗೋವಿನಜೋಳಕ್ಕೆ ಬೇಡಿಕೆ ಹೆಚ್ಚಲಾರಂಭಿಸಿದೆ. ಪ್ರತಿ ವರ್ಷ ಕುಕ್ಕುಟೋದ್ಯಮ ಒಂದರಿಂದಲೇ ಹೆಚ್ಚುವರಿ 10 ಲಕ್ಷ ಟನ್‌ಗೆ ಬೇಡಿಕೆ ಬರುತ್ತಿದೆ. ಈ ಹಿನ್ನೆಲೆಯಲ್ಲಿ ಭಾರತ ನೆರೆಯ ಮಯನ್ಮಾರ್‌ನಿಂದ ಗೋವಿನಜೋಳ ಆಮದು ಮಾಡಿಕೊಳ್ಳಲಾರಂಭಿಸಿದೆ.

ಭಾರತಕ್ಕೆ ಬಂದಿಳಿದ ಮಯನ್ಮಾರ್ ಅತಿಥಿ...!

ಭಾರತ ನೆರೆಯ ಮಯನ್ಮಾರ್‌ನಿಂದ ಗೋವಿನಜೋಳ ಆಮದು ಮಾಡಿಕೊಳ್ಳಲಾರಂಭಿಸಿದೆ. ಇದಕ್ಕೆ ಆಮದು ಶುಲ್ಕವಿಲ್ಲ. ಈಗಾಗಲೇ ಮೂರು ಹಡಗುಗಳಲ್ಲಿ ಬಂದಿಳಿದಿದ್ದು, ಎರಡನೇ ಕಂತು ಜುಲೈ ಅಂತ್ಯಕ್ಕೆ ಬಂದಿಳಿಯಲಿದೆ.

ಆರಂಭದಲ್ಲಿ ಟನ್ ಒಂದಕ್ಕೆ 268 ಡಾಲರ್ ದರದಲ್ಲಿ ಆಮದು ಮಾಡಿಕೊಳ್ಳಲಾಗಿತ್ತು. ಆದರೆ ಈಗ ಬೆಲೆ ಹೆಚ್ಚಳವಾಗಿದೆ. 286 ಡಾಲರ್ ದರಕ್ಕೆ 10,000 ಟನ್ ಖರೀದಿಗೆ ಆಫರ್ ಬಂದಿದ್ದು, ಬೆಲೆ ಹೆಚ್ಚಾಗಿದೆ ಎಂದು ಯಾರೂ ಮುಂದಾಗಲಿಲ್ಲ. ಇನ್ನು ಮಯನ್ಮಾರ್ ಅತ್ಯಂತ ಬಡ ದೇಶವಾದ್ದರಿಂದ ಸದ್ಯಕ್ಕೆ ಆಮದು ಸುಂಕ ವಿಧಿಸಲಾಗಿಲ್ಲ. ಒಂದು ವೇಳೆ ಗೋವಿನಜೋಳ ಬೇರೆ ದೇಶದಿಂದ ಬಂದಿದ್ದರೆ ಕಸ್ಟಮ್ಸ್ ಇಲಾಖೆಯು ಅದರ ಮೇಲೆ ಶೇ.60ರಷ್ಟು ಸುಂಕ ವಿಧಿಸುವ ಸಾಧ್ಯತೆ ಇತ್ತು. ಜೊತೆಗೆ ಶೇ.5ರಷ್ಟು ಜಿಎಸ್‌ಟಿ ಹಾಗೂ ಶೇ.10ರಷ್ಟು ಸಮಾಜ ಕಲ್ಯಾಣ ಸರ್ಛಾರ್ಜ್ ಕೂಡ ಸೇರ್ಪಡೆಯಾಗುತ್ತಿತ್ತು. ಆದರೆ ಕೇಂದ್ರ ಸರಕಾರ ಟಾರಿಫ್ ರೇಟ್ ಕೋಟಾದಡಿಯಲ್ಲಿ ಶೇ.15ರಷ್ಟು ರಿಯಾಯಿತಿ ಸುಂಕ ದರದಲ್ಲಿ ಆಮದಿಗೆ ಅವಕಾಶ ಕಲ್ಪಿಸಿದೆ. ಅದರಂತೆ 2020ರಲ್ಲಿ ಟಿಆರ್‌ಕ್ಯೂ ಅಡಿಯಲ್ಲಿ 5 ಲಕ್ಷ ಟನ್ ಆಮದು ಮಾಡಿಕೊಳ್ಳಲು ಅವಕಾಶ ನೀಡಿತ್ತು.

ಸದ್ಯಕ್ಕೆ ಗೋವಿನಜೋಳ ಆಮದಾಗುತ್ತಿರುವುದು ಏಕೆಂದರೆ ಅದಕ್ಕೆ ಕುಕ್ಕುಟೋದ್ಯಮದಿಂದ ಭಾರೀ ಬೇಡಿಕೆ ಬರುತ್ತಿದೆ. ಫಾರ್ಮ್ ಕೋಳಿಗಳಿಗೆ ಗೋವಿನ ಜೋಳವೇ ಮುಖ್ಯ ಆಹಾರ. ತಮಿಳುನಾಡು ಸೇರಿದಂತೆ ದಕ್ಷಿಣ ಭಾರತದ ರಾಜ್ಯಗಳಲ್ಲಿನ ಕುಕ್ಕುಟೋದ್ಯಮ ಆಮದು ಗೋವಿನಜೋಳವನ್ನು ಹೆಚ್ಚಾಗಿ ಅವಲಂಭಿಸಿವೆ. ಹೀಗಾಗಿ ಈ ರಾಜ್ಯಗಳಿಂದ ಗೋವಿನಜೋಳ ಆಮದಿಗೆ ಹೆಚ್ಚಿನ ಒಲವು ತೋರಲಾಗುತ್ತಿದೆ. ಪ್ರಸ್ತುತ ಮಯನ್ಮಾರ್‌ನಿಂದ ತಮಿಳುನಾಡಿನ ತೂತುಕುಡಿ(ಟ್ಯೂಟಿಕ್ಯೂರಿನ್) ಬಂದರಿಗೆ ಮೂರು ಹಡಗುಗಳ ತುಂಬ ಗೋವಿನಜೋಳ ರವಾನೆಯಾಗಿರುವುದು ವಿಶೇಷ.

ಬೇಡಿಕೆ ಹೆಚ್ಚಳ

ದೇಶೀಯ ಮಾರುಕಟ್ಟೆಯಲ್ಲಿ ಗೋವಿನಜೋಳಕ್ಕೆ ಬೇಡಿಕೆ ಹೆಚ್ಚಲಾರಂಭಿಸಿದೆ. ಪ್ರತಿ ವರ್ಷ ಕುಕ್ಕುಟೋದ್ಯಮ ಒಂದರಿಂದಲೇ ಹೆಚ್ಚುವರಿ 10 ಲಕ್ಷ ಟನ್‌ಗೆ ಬೇಡಿಕೆ ಬರುತ್ತಿದೆ. ಒಟ್ಟಾರೆಯಾಗಿ 16 ದಶಲಕ್ಷ ಟನ್ ಬೇಡಿಕೆ ಇದೆ ಎಂದು ಹೇಳಲಾಗುತ್ತಿದೆ. ಏಕೆಂದರೆ ಕೇವಲ ಕುಕ್ಕುಟೋದ್ಯಮದಿಂದ ಮಾತ್ರವಲ್ಲ ಗಂಜಿ ಉತ್ಪಾದಕರು ಹಾಗೂ ಎಥನಾಲ್ ತಯಾರಕರಿಂದಲೂ ಗೋವಿನಜೋಳಕ್ಕೆ ಭರ್ಜರಿ ಬೇಡಿಕೆ ಕುದುರಲಾರಂಭಿಸಿದೆ. ಆಮದು ಗೋವಿನ ಜೋಳ ಉತ್ತಮ ಗುಣಮಟ್ಟದ್ದಾಗಿದ್ದರೆ ಅಧಿಕ ಪ್ರಮಾಣದಲ್ಲಿ ಎಥನಾಲ್ ಉತ್ಪಾದಿಸಲು ನೆರವಾಗುತ್ತದೆ. ಇದನ್ನು ತಿಂದ ಫಾರ್ಮ್ ಕೋಳಿಗಳು ಕೂಡ ದಷ್ಟಪುಷ್ಟವಾಗಿ ಬೆಳೆಯುತ್ತವೆ ಎಂದು ಹೇಳಲಾಗಿದೆ. ಇದರಿಂದ ಫಾರ್ಮ್ ಕೋಳಿ ಉತ್ಪಾದಕರಿಗೆ ಭರಪೂರ ಲಾಭ ದೊರೆಯಲಿದೆ.

ರೈತರಿಗೆ ಸಂಕಷ್ಟ

ಪ್ರಸ್ತುತ ದೇಶಾದ್ಯಂತ ಎಪಿಎಂಸಿಗಳಲ್ಲಿ ಗೋವಿನಜೋಳ ದರ ಕ್ವಿಂಟಲ್‌ಗೆ 2091 ರೂ ಸರಾಸರಿ ನಡೆಯುತ್ತಿದೆ. ಇದು ಕನಿಷ್ಠ ಬೆಂಬಲ ಬೆಲೆ 2090 ರೂಗಿಂತ ಹೆಚ್ಚಾಗಿದೆ. ಆದರೆ ಜೂನ್ ಎರಡನೇ ವಾರದ ಹೊತ್ತಿಗೆ ಮಧ್ಯಪ್ರದೇಶ, ತಮಿಳುನಾಡು, ತೆಲಂಗಾಣ, ಮಹಾರಾಷ್ಟ್ರ, ಕರ್ನಾಟಕ ರಾಜ್ಯಗಳ ಎಪಿಎಂಸಿಗಳಲ್ಲಿ ದರ 2400 ರೂಗಿಂತಲೂ ಹೆಚ್ಚಾಗಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ ಗೋವಿನಜೋಳದ ದರ ಕ್ವಿಂಟಲ್‌ಗೆ 1700 ರೂ ಇತ್ತು. ಆದರೆ ಹೀಗೆ ಸುಂಕರಹಿತವಾಗಿ ಎಗ್ಗಿಲ್ಲದೇ ಗೋವಿನಜೋಳ ಆಮದಾದರೆ ಸ್ಥಳೀಯ ರೈತರಿಗೆ ತೊಂದರೆಯಾಗಲಿದೆ. ಮಾರುಕಟ್ಟೆಯಲ್ಲಿ ದೇಶೀಯ ಗೋವಿನಜೋಳದ ಬೆಲೆ ಕುಸಿದು ರೈತರು ಸಂಕಷ್ಟಕ್ಕೀಡಾಗುವ ಸಾಧ್ಯತೆ ಇದೆ ಎಂದು ಮಾರುಕಟ್ಟೆ ವಿಶ್ಲೇಷಕರು ಹೇಳುತ್ತಾರೆ.

ಉತ್ಪಾದನೆ ಕುಂಠಿತ

ಈ ಕುರಿತು ಸರಕಾರ ಎಚ್ಚರಿಕೆಯಿಂದ ನಿರ್ಣಯ ಕೈಗೊಳ್ಳಬೇಕು. ಕೆಲವು ಆಮದು ನಿರ್ಬಂಧಗಳು ಜಾರಿಯಾಗಲೇಬೇಕು. ಇದಕ್ಕೆ ಕನಿಷ್ಠ ಆಮದು ದರವನ್ನು ನಿಗದಿಪಡಿಸಬೇಕು ಎಂದು ಸಲಹೆ ನೀಡುತ್ತಾರೆ. ಹವಾಮಾನ ವೈಪರೀತ್ಯದ ಪರಿಣಾಮವಾಗಿ ಬಿಹಾರ ಮತ್ತು ಪಶ್ಚಿಮ ಬಂಗಾಳಗಳಲ್ಲಿ ಹಿಂಗಾರು ಗೋವಿನಜೋಳ ಬೆಳೆ ಹಾನಿಯಾಗಿದೆ. ಇವೆರಡು ರಾಜ್ಯಗಳಲ್ಲಿ ಇಳುವರಿ ಶೇ.10ರಷ್ಟು ಕುಂಠಿತವಾಗಬಹುದೆಂದು ಅಂದಾಜಿಸಲಾಗಿದೆ. ಕರ್ನಾಟಕದಲ್ಲಿ ಕೂಡ ಬರಪರಿಸ್ಥಿತಿಯಿಂದಾಗಿ ಕೆಲವು ಉತ್ಪಾದನಾ ಕೇಂದ್ರಗಳಲ್ಲಿ ಗೋವಿನಜೋಳ ಬೆಳೆ ಹಾನಿಯಾಗಿದೆ. ಇನ್ನು 2023–24ನೇ ಬೆಳೆ ವರ್ಷದಲ್ಲಿ ಗೋವಿನ ಜೋಳ ಉತ್ಪಾದನೆ 35.67 ದಶಲಕ್ಷ ಟನ್ ಇರುವುದೆಂದು ಕೇಂದ್ರ ಕೃಷಿ ಸಚಿವಾಲಯವು ಅಂದಾಜಿಸಿದೆ. ಕಳೆದ ವರ್ಷ ಇದು 38.08 ದಶಲಕ್ಷ ಟನ್‌ದಷ್ಟಿತ್ತೆಂದು ತಿಳಿಸಿದೆ.

SamyukthaKarnataka
Pg.07